## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ತಾಲ್ಲೂಕು ಪಂಚಾಯಿತಿ ಚನ್ನಪಟ್ಟಣ, ರಾಮನಗರ ಜಿಲ್ಲೆ ಇವರ ಅಮಾನತ್ತನ್ನು ತೆರವುಗೊಳಸುವ ಬಗ್ಗೆ – ಆದೇಶ.

ಓದಲಾಗಿದೆ :- 1) ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರ ಪತ್ರ ಸಂಖ್ಯೆ:ಎಸಿಬಿ/ರಾಮನಗರ/ದೂಅ.ವಿ/31/2016, ದಿ:9.5.2017

2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ತುಮಕೂರು ಜಿಲ್ಲಾ ಪಂಚಾಯತ್ ಇವರ ಪತ್ರ ಸಂಖ್ಯೆ : ರಾಜಿಪಂ/ಸಿ8/ಆರ್-114/2016-17-743, ದಿನಾಂಕ : 29.05.2017 ಮತ್ತು 05.06.2017.

3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 180 ಕೆಎಸ್‌ಎಸ್ 2017, ದಿನಾಂಕ:26.10.2017.

4) ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ:6441/2017ಕ್ಕೆ ಸಂಬಂಧಿಸಿದಂತೆ ದಿನಾಂಕ:18.01.2018ರ ಆದೇಶ.

5) ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಇವರ ಮನವಿಗಳುದಿನಾಂಕ:31.10.2017 ಹಾಗೂ :09.03.2018(13.03.2018)

*******

ಪ್ರಸ್ತಾವನೆ :-

ಪೋಲೀಸ್ ಮಹಾ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ:9.05.2017ರ ಪತ್ರದಲ್ಲಿ ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಇವರು 2009-10ನೇ ಸಾಲಿನಲ್ಲಿ ರಾಮನಗರ ತಾಲ್ಲೂಕು, ಬಿಡದಿ ಹೋಬಳಿಯ ಬನ್ನಿಕುಪ್ಪೆಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ಕೆಲಸನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ಚಿಕ್ಕಹೊಂಬಕ್ಕ ಮತ್ತು ಇತರರ ಹೆಸರಿನಲ್ಲಿದ್ದ ಅವರಗೆರೆ ಗ್ರಾಮ ಸರ್ವೆ ನಂ.39/9ರ 0.10ಗುಂಟೆ ಜಮೀನಿನ ಪೈಕಿ 0.05 ಗುಂಟೆ ಕಂದಾಯ ಜಮೀನನ್ನು ಶುದ್ಧ ಕ್ರಯದ ಮೂಲಕ ವರ್ಗಾವಣೆ ಆಗದೇ ಇದ್ದರೂ ಸಹ ಹಾಗೂ ಗ್ರಾಮ ಠಾಣಾ ವ್ಯಾಪ್ತಿಗೆ ಸೇರ್ಪಡೆ ಮಾಡಲು ನಿರ್ವಹಿಸಬೇಕಾದ ನಿಯಮಗಳನ್ನು ಪಾಲನೆ ಮಾಡದೇ ಜಿ.ಪಿ.ಎ.ಆಧಾರದ ಮೇಲೆ ಶ್ರೀಮತಿ ಬಿ. ಸುನಂದ ಕೋಂ.ಸಿ.ಸೋಮೇಗೌಡ, ಎಂಬುವವರಿಗೆ ಖಾನೇಷುಮಾರಿ ಸಂಖ್ಯೆ : 195/1 ಮತ್ತು 195/2 ರಂತೆ ಗ್ರಾಮ ಠಾಣಾಕ್ಕೆ ಸೇರ್ಪಡೆ ಮಾಡಿಕೊಂಡು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ನಿಯಮಬಾಹಿರವಾಗಿ ಅಕ್ರಮವಾಗಿ ಖಾತೆ ಮಾಡಿಕೊಟ್ಟು ಇಲಾಖಾ ನಿಯಮ ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದಾಗಿ ಸದರಿಯವರ ವಿರುದ್ಧ ಸೂಕ್ತ ಶಿಸ್ತುಕ್ರಮವನ್ನು ಕೈಗೊಳ್ಳುವಂತೆ ಕೋರಿ ವರದಿ ಸಲ್ಲಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ಇವರು ಮೇಲೆ ಓದಲಾದ ಕ್ರಮಾಂಕ(2) ದಿನಾಂಕ: 29.05.2017 ಮತ್ತು 05.06.2017ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಶ್ರೀ ಎಂ. ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಇವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ನಿಯಮಬಾಹಿರವಾಗಿ ಸರ್ಕಾರಿ ಜಾಗವನ್ನು ಅಕ್ರಮವಾಗಿ ಖಾತೆ ಮಾಡಿಕೊಟ್ಟು ಇಲಾಖಾ ನಿಯಮ ಉಲ್ಲಂಘನೆ ಮಾಡಿ, ಕರ್ತವ್ಯಲೋಪ ಎಸಗಿರುವುದು ಭ್ರಷ್ಟಾಚಾರ ನಿಗ್ರಹ ದಳವು ನಡೆಸಿದ ತನಿಖೆಯ ಪ್ರಾಥಮಿಕ ವಿಚಾರಣೆಯಿಂದ ಕಂಡುಬಂದಿರುವ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಯ ವಿರುದ್ಧ ಶಿಸ್ತುಕ್ರಮಕೈಗೊಳ್ಳಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಪ್ರಕರಣವನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ (3)ರ ಸರ್ಕಾರದ ಆದೇಶ ದಿನಾಂಕ:26.10.2017 ರಂದು ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ತಾಲ್ಲೂಕು ಪಂಚಾಯಿತಿ ಚನ್ನಪಟ್ಟಣ, ರಾಮನಗರ ಜಿಲ್ಲೆ ಇವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಇಲಾಖಾ ನಿಯಮ ಉಲ್ಲಂಘನೆ ಮಾಡಿ ಗ್ರಾಮ ಠಾಣಾ ಜಾಗವನ್ನು ಅಕ್ರಮವಾಗಿ ಖಾತೆ ಮಾಡಿಕೊಟ್ಟು, ಕರ್ತವ್ಯಲೋಪವೆಸಗಿದ್ದು, ಸದರಿಯವರು ಸರ್ಕಾರಿ ನೌಕರರಾಗಿ ಪೂರ್ಣ ಪ್ರಮಾಣದ ಕರ್ತವ್ಯನಿಷ್ಠೆ ತೋರದೇ, ಗಂಭೀರ ಸ್ವರೂಪದ ಕರ್ತವ್ಯ ಲೋಪ / ದುರ್ನಡತೆ ಎಸಗಿ ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು, 1966ರ ನಿಯಮ 3(1)ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಸದರಿ ದುರ್ನಡತೆಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1)(ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(4) ರಲ್ಲಿ ಶ್ರೀ ಎಂ.ಲೋಕೇಶ್ ಇವರು ಸರ್ಕಾರದ ದಿನಾಂಕ:26.10.2017ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:6441/2017ರನ್ನು ಸಲ್ಲಿಸಿದ್ದು, ಮಾನ್ಯ ಆಡಳಿತ ನ್ಯಾಯಮಂಡಳಿಯು ಸದರಿ ಅರ್ಜಿಗೆ ಸಂಬಂಧಿಸಿದಂತೆ ದಿನಾಂಕ:18.01.2018 ರಂದು ಅರ್ಜಿದಾರರ ತಮ್ಮ ಅರ್ಜಿಯೊಂದಿಗೆ ಸಲ್ಲಿಸಿರುವ ಮನವಿ ದಿನಾಂಕ:31.10.2017 (ಅನುಬಂಧ-4)ರಲ್ಲಿ ಕೋರಿರುವಂತೆ ಸದರಿಯವರ ಅಮಾನತ್ತನ್ನು ತೆರವುಗೊಳಿಸಿ 2 ತಿಂಗಳೊಳಗಾಗಿ ಸೇವೆಗೆ ಪುನರ್ ಸ್ಥಾಪಿಸುವಂತೆ ಆದೇಶಿಸಿರುತ್ತದೆ.

ಮಾನ್ಯ ಆಡಳಿತ ಮಂಡಳಿಯ ಆದೇಶದ ಹಿನ್ನೆಲೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (5) ದಿನಾಂಕ:31.10.2017 ಮತ್ತು 09.3.2018 (13.03.2018)ರಲ್ಲಿ ಶ್ರೀ ಎಂ. ಲೋಕೇಶ್ ಇವರು ತಮ್ಮ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಅಮಾನತ್ತನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ.

ಸರ್ಕಾರವು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶ ಹಾಗೂ ಶ್ರೀ ಎಂ.ಲೋಕೇಶ್ ಇವರ ಮನವಿಯನ್ನು ಪರಿಶೀಲಿಸಿದ್ದು, ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಇವರ ಅಮಾನತ್ತನ್ನು ತೆರವುಗೊಳಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 180 ಕೆಎಸ್ ಎಸ್ 2017**
**ಬೆಂಗಳೂರು, ದಿನಾಂಕ :10.04.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಿದೆ. ಅಲ್ಲದೆ, ಸದರಿಯವರನ್ನು ತಾಲ್ಲೂಕು ಪಂಚಾಯತ್ ಚಿಂಚೋಳಿ, ಕಲಬುರಗಿ ಇಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
10/4/2018
(ಡಿ.ಕೆ. ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

10/4/2018

ಇವರಿಗೆ :-

1) ಮಹಾಲೇಖಪಾಲರು (ಅ. ಮತ್ತು ಇ), ಕರ್ನಾಟಕ, ಬೆಂಗಳೂರು.
2) ಅಪರ ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ / ಕಲಬುರಗಿ
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚನ್ನಪಟ್ಟಣ / ಚಿಂಚೋಳಿ.
5) ಸಂಬಂಧಪಟ್ಟ ಅಧಿಕಾರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ರವರ ಮುಖಾಂತರ.
6) ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು(ಗ್ರಾ.ಉ), ಅಂಚೆ ಕಛೇರಿ ಹತ್ತಿರ, ಕೇತಗಾನಹಳ್ಳಿ ರಸ್ತೆ, ಬಿಡದಿ, ರಾಮನಗರ ಜಿಲ್ಲೆ.
7) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ ರವರಿಗೆ.
8) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ(ಆಡಳಿತ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರು.
9) ಮೇಲ್ವಿಚಾರಕರು, ಗಣಕಯಂತ್ರ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.